# ಸತ್ಸಂಗ

**ಸ್ವಾಮಿ ಹೃದಾನಂದ**

ಬೆಂಗಳೂರಿನ ಬಳಿಯಿರುವ ಶಿವನಹಳ್ಳಿಯಲ್ಲಿನ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಲೇಖಕರು ಸತ್ಸಂಗದ ಅನೇಕ ಆಯಾಮಗಳನ್ನು ಹೃದ್ಯವಾಗಿ ವಿವರಿಸಿದ್ದಾರೆ.

**ಸಂಗ ಎಲ್ಲರಿಗೂ ಬೇಕು**

ಸಂಗ ಅಂದರೆ ಸಹವಾಸ, ಸಾಹಚರ್ಯ. ಪ್ರಾಣಿ ಅಂದ ಮಾತ್ರಕ್ಕೆ ಅದಕ್ಕೊಂದು ಸಂಗ ಬೇಕು. ಯಾವುದೇ ಸಂಗ ಬಯಸದ ಜೀವಿ ಇಡೀ ವಿಶ್ವದಲ್ಲೇ ಸಿಗುವುದು ಕಷ್ಟ. ಬ್ರಹ್ಮಾಂಡದಲ್ಲಿ ಕಂಡುಬರುವ ಅತಿ ದೊಡ್ಡ ಜೀವಿಯೂ ಕೂಡ ಸಂಗಕ್ಕಾಗಿ ತಪಿಸುತ್ತದೆ. ಸೃಷ್ಟಿಯ ಆದಿಯಲ್ಲಿ ಬ್ರಹ್ಮನು ಒಬ್ಬನೇ ಇದ್ದು "ನನ್ನ ಜೊತೆ ಯಾರೂ ಇಲ್ಲವಲ್ಲ" ಎಂದು ಬೇಸರ ಪಡುತ್ತಾನೆ. ವಿರಾಟ್ ಪುರುಷನ ಮನಸ್ಸಿನಲ್ಲಿ ಕಲ್ಪನೆ ಬಂತು "ನಾನೊಬ್ಬನೇ ಇರುವೆನು. ನಾನು ಅನೇಕವಾಗುತ್ತೇನೆ". ಅದರಂತೆ ಬಹಳ ವಿಧಗಳಲ್ಲಿ ವ್ಯಕ್ತವಾದ; ಇಡೀ ಬ್ರಹ್ಮಾಂಡ ವನ್ನೇ ಸೃಷ್ಟಿ ಮಾಡಿ ಅದರ ಮೆರುಗಿನ ಸಂಗದಲ್ಲಿ ಈಗಲೂ ನಲಿಯುತ್ತಿದ್ದಾನೆ.

ಬ್ರಹ್ಮನಿಗೇ ಸಂಗ ಬೇಕಾಗಿರುವಾಗ, ನಮಗೆ ಬೇಕಿಲ್ಲವೇ? ನಮಗೂ ಬೇಕು. "ನನಗೆ ಯಾರ ಸಂಗವೂ ಬೇಡ, ನಾನು ನಿಸ್ಸಂಗನಾಗಿರಬೇಕು" ಎಂದು ಯಾರಾದರೂ ಒಂದು ಕೊಠಡಿಯಲ್ಲಿ ತನ್ನನ್ನು ಬಂಧಿಸಿಕೊಳ್ಳುವ ಪ್ರಯತ್ನ ಮಾಡಿ ನೋಡಬಹುದು. ಅದು ಒಂದು ದಿನ ಸಾಧ್ಯವಾಗಬಹುದು ಅಥವಾ ಎರಡು ದಿನ ಆಗಬಹುದು. ಮೂರನೇ ದಿನ ಆತನನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು ಅಷ್ಟೇ. ಶ್ರೀರಾಮಕೃಷ್ಣರು ಹೇಳುವಂತೆ ಭಗವಂತನ ದರ್ಶನ ಪಡೆದ ಬಳಿಕ ಸಿದ್ಧ ಪುರುಷನೂ ಕೂಡ ಭಕ್ತರ ಸಂಗದಲ್ಲಿ ಇರುತ್ತಾನೆ. ಭಗವಂತನಿಗೂ ಕೂಡ ಭಕ್ತರ ಸಂಗ ಬೇಕು. ಬ್ರಹ್ಮ ಅಥವಾ ಭಗವಂತ—ಇವರಲ್ಲಿ ಇಚ್ಛಾಶಕ್ತಿ ಇದೆ. ಏನು ಬೇಕಾದರೂ ಮಾಡಬಲ್ಲರು. ತಮಗೆ ಎಂತಹ ಸಂಗ ಬೇಕೋ ಅಂತಹದನ್ನು ತಾವೇ ಕಲ್ಪಿಸಿಕೊಳ್ಳಬಲ್ಲರು. ಆದರೆ ನಮಗೆ ಆ ರೀತಿಯ ಶಕ್ತಿ ಇದೆಯೇ? ಖಂಡಿತ ಇಲ್ಲ. ತಾನಾಗಿ ಒದಗಿ ಬರುವಂತಹ ಸಂಗ ಈ ಪ್ರಪಂಚದಲ್ಲಿ ಎಂಥದ್ದು ಎಂದು ನಾವು ವಿಚಾರಿಸ ಬೇಕಾಗಿದೆ.

**ನಮಗೆ ಸತ್ಸಂಗ ಏಕೆ ಬೇಕು?**

ನಾವು ಆಧುನಿಕ ಜಗತ್ತಿನಲ್ಲಿ ವಾಸಮಾಡುತ್ತಿದ್ದೇವೆ. ವೈಜ್ಞಾನಿಕ ಆವಿಷ್ಕಾರಗಳಿಂದಾಗಿ ಮನುಷ್ಯನ ವಿಚಾರಶಕ್ತಿ ಅಗಾಧವಾಗಿ ಬೆಳೆದಿದೆ. ಅದರ ಬಲದಿಂದ ಅಂಧ ವಿಶ್ವಾಸಗಳು ಕುಸಿದು ಬೀಳುತ್ತಿವೆ. ಅದರ ಜೊತೆಗೆ ದೇವರ ಅಸ್ತಿತ್ವದ ವಿಶ್ವಾಸದ ಮೇಲೆ ಕೂಡ ಅದು ತನ್ನ ವಜ್ರಪ್ರಹಾರವನ್ನು ಬೀಸುತ್ತಿದೆ. ಪ್ರತಿದಿನದ ಜೀವನದಲ್ಲಿ ಪರಿಪರಿಯ ಸುಖಗಳನ್ನು ಪಡೆಯುವುದೇ ಇಂದಿನ ಮಾನವನ ಪ್ರಧಾನ ಉದ್ದೇಶ ವಾಗಿದೆ. ಆಧುನಿಕ ವಿಜ್ಞಾನ ಅಂತಹ ಸುಖಗಳನ್ನು ಒದಗಿಸು ತ್ತಿದೆ. ಸುಖ ಭೋಗದ ಈ ತಿಕ್ಕಾಟದಲ್ಲಿ ಮನುಷ್ಯ ಒಂದು ಹೊಸ ನಿಯಮವನ್ನು ಅಳವಡಿಸಿಕೊಂಡಿದ್ದಾನೆ. ಅದೇ— "ಬಳಸು ಮತ್ತು ಬಿಸಾಡು"(Use and Throw). ಒಂದು ವಸ್ತುವನ್ನು ಸ್ವಲ್ಪ ಕಾಲ ಮಾತ್ರ ಬಳಸಿ ಅದನ್ನು ಬಿಸಾಡುವುದು. ಆದರೆ ಅದು ವಸ್ತುವಿಗೆ ಮಾತ್ರ ಸೀಮಿತವಾಗದೆ ಮಾನವ ಸಂಬಂಧಗಳ ಮೇಲೂ ಪ್ರಯೋಗವಾಗುತ್ತಿದೆ. ಉದಾಹರಣೆಗೆ ವಿವಾಹವಾದ ನಂತರ ಸ್ವಲ್ಪ ಕಾಲದ ನಂತರವೇ ಕ್ಷುಲ್ಲಕ ಕಾರಣಗಳಿಗಾಗಿ ಹೆಂಡತಿಯನ್ನಾಗಲಿ, ಗಂಡನನ್ನಾಗಲಿ ಬಿಟ್ಟು ಬೇರೆ ಹೆಂಡತಿ ಅಥವಾ ಗಂಡನನ್ನು ಪಡೆಯುವುದು. "ನಾನು ಮತ್ತು ನನ್ನ ಸುಖ" ಅನ್ನುವುದು ಪ್ರಧಾನವಾಗಿ ಎಲ್ಲಾ ಮಾನವ ಸಂಬಂಧಗಳು ಕುಸಿದುಬಿದ್ದಿವೆ. ಇಂಟರ್‌ನೆಟ್ ಮುಂತಾದವುಗಳಿಂದ ದೂರದ ಕಲ್ಪನೆಯೇ ಹೋಗುತ್ತಿದ್ದು ಇಡೀ ಜಗತ್ತು ಒಂದೇ ಸ್ಥಳವಾಗುತ್ತಿದೆ. ಪ್ರಪಂಚದ ಯಾವುದೇ ಒಂದು ಕೋಣೆಯಲ್ಲಿ ಏನಾದರೂ ಆಯಿತೆಂದರೆ ತತ್‌ಕ್ಷಣವೇ ಎಲ್ಲರಿಗೂ ಗೊತ್ತಾಗುತ್ತದೆ. ಒಬ್ಬ ತನ್ನ ಮನೆಯಲ್ಲೆ ಕುಳಿತು ವಿಶ್ವದ ಎಲ್ಲ ಸುದ್ದಿಗಳನ್ನು ತಿಳಿಯಬಲ್ಲ. ಆದರೆ ತನ್ನ ಪಕ್ಕದಲ್ಲೇ ಇರುವ ಹೆಂಡತಿಯ ಬಗ್ಗೆ ತಿಂಗಳುಗಟ್ಟಲೆ ಸುದ್ದಿ ಇಲ್ಲ; ಮಾತುಕತೆ ಇಲ್ಲ. ಆದ್ದರಿಂದ ಮನುಷ್ಯ ಏಕಾಂಗಿಯಾಗಿ "ತನ್ನವರು ಅಂತ ಯಾರೂ ಇಲ್ಲವಲ್ಲ" ಎಂದು ಪರಿತಪಿ ಸುವ ಕಾಲ ಒದಗಿದೆ. ಸಮಯದ ಮೌಲ್ಯಪ್ರಜ್ಞೆ ಬೆಳೆದು ಪ್ರತಿ ಕ್ಷಣವನ್ನೂ ಹೆಚ್ಚು ಹೆಚ್ಚು ಹಣ ಅಥವಾ ವಸ್ತುಗಳನ್ನು ಗಳಿಸುವುದಕ್ಕೇ ಬಳಸಲಾಗುತ್ತಿದೆ. ಒಬ್ಬ ಇನ್ನೊಬ್ಬನ ಪ್ರತಿಸ್ಪರ್ಧಿಯಾಗಿ ಜಗದ ಮೈದಾನದಲ್ಲಿ ಜೀವನದ ಓಟ ಓಡು ತ್ತಿದ್ದಾನೆ. ಈ ರೀತಿ ಪ್ರತಿಯೊಬ್ಬನೂ ಸುಖಶಾಂತಿಗಳನ್ನು ಬಯಸುತ್ತ ಆಧುನಿಕ ಜಗತ್ತಿನಲ್ಲಿ ರಭಸದ ಓಟ ನಡೆಸು ತ್ತಿದ್ದಾನೆ—ಅದರ ಫಲ ಏನು?

ಬಹುಶಃ ಈ ಜೀವನದ ಓಟ, ವಾಹನಗಳ ಗತಿಯನ್ನು ಮೀರಿಸುವುದೇನೋ? ಎಲ್ಲಾ ಓಟಗಳಿಗೂ ಪಥ ಅಥವಾ ರಸ್ತೆ ಅನ್ನುವುದು ಬೇಕು. ಮತ್ತೆ ಪ್ರತಿಯೊಂದು ರಸ್ತೆಯೂ ಅನಂತಗೆ

ಮತ್ತು ವಕ್ರಗತಿಗಳಿಂದ ತುಂಬಿರುತ್ತದೆ. ಈ ರೀತಿಯ ವಕ್ರಗತಿ ಅಥವಾ ಅಡಚಣೆಗಳಿಂದ ಪಾರಾಗಲು ವಾಹನಕ್ಕೊಂದು ಬ್ರೇಕ್ ಇರುತ್ತದೆ. ಬೇಕಾದಲ್ಲಿ ಗಾಡಿಯನ್ನು ನಿಧಾನವಾಗಿಸಿ ಅಥವಾ ನಿಲ್ಲಿಸಿ ರಸ್ತೆಯ ಬಗ್ಗೆ ಖಚಿತಪಡಿಸಿಕೊಂಡು ಮುಂದಕ್ಕೆ ಸರಿಯಾಗಿ ಹೋಗಬಹುದು. ಇಲ್ಲದಿದ್ದಲ್ಲಿ ಅಪಘಾತ ನಿಶ್ಚಿತ. ಅದೇ ಪ್ರಕಾರ ಆಧುನಿಕ ಮಾನವನು ಮಾರ್ಗದಲ್ಲಿ ಬರುವಂತಹ ತಿರುವುಮುರುವುಗಳನ್ನು ಬ್ರೇಕ್ ಇಲ್ಲದೇ ಹೇಗೆ ನಿಮರಿಸಬಲ್ಲ? ಅವನಿಗೂ ಒಂದು ಬ್ರೇಕ್ ಬೇಕು. ಅದೇ ಸತ್ಸಂಗ ಅನ್ನುವ ಬ್ರೇಕ್.

**ಪ್ರಯಾಣಿಕನಾಗಿ ಮನುಷ್ಯ**

ಕಠೋಪನಿಷತ್ತಿನಲ್ಲಿ ಒಂದು ರೂಪಕ ಹೀಗಿದೆ. ಪ್ರತಿಯೊಬ್ಬ ಮನುಷ್ಯ ಅಥವಾ ಜೀವಿಯೂ ಬದುಕಿನ ಪಥದಲ್ಲಿ ಪ್ರಯಾಣಿಕ. ಶರೀರ ಅನ್ನುವ ರಥದ ಮೇಲೆ ಪಯಣಿಸುತ್ತಿದ್ದಾನೆ. ಅವನ ಬುದ್ಧಿಯೇ ಸಾರಥಿ; ಮನಸ್ಸು ಕಡಿವಾಣ. ಪಂಚೇಂದ್ರಿಯಗಳನ್ನು ಕುದುರೆಗಳಾಗಿ ಹೊಂದಿರುವ ಈ ರಥ ಓಡುತ್ತದೆ. ಚಂಚಲ ಸ್ವಭಾವದ ಇಂದ್ರಿಯಗಳನ್ನು ಮನಸ್ಸು ಅನುಸರಿಸುತ್ತದೆ. ಮನಸ್ಸು ಆ ರೀತಿ ಇಂದ್ರಿಯ ಸುಖಗಳನ್ನು ಅರಸುತ್ತ ಮುನ್ನುಗ್ಗುತ್ತಿದ್ದರೆ ಸಾರಥಿಯಾದ ಬುದ್ಧಿಯು ಕಡಿವಾಣಗಳನ್ನು ಹಿಡಿದು ಅದನ್ನು ತಡೆಯಬೇಕು. ಇಲ್ಲದೆ ಹೋದರೆ ಒಂದೊಂದು ಇಂದ್ರಿಯವೂ ಒಂದೊಂದು ಕಡೆಗೆ ಎಳೆದು ನಾಗಾಲೋಟಕ್ಕೆ ಬ್ರೇಕ್ ಇಲ್ಲದೆ ಮನುಷ್ಯ ಅಪಘಾತದಿಂದ ಸಾಯುತ್ತಾನೆ. 'ಜೀವನ'ವೆಂಬ ಪ್ರಯಾಣದಲ್ಲಿ ಇದನ್ನು ತಪ್ಪಿಸಬೇಕಾದರೆ ಸಾರಥಿಯಾದ ಬುದ್ಧಿಯು ಕಡಿವಾಣಗಳನ್ನು ಸಮಯಕ್ಕೆ ಸರಿಯಾಗಿ ಬಿಗಿ ಹಿಡಿಯಬೇಕು. ಪಥದ ತಗ್ಗು, ದಿಣ್ಣೆ, ತಿರುವು, ಮುರುವು ನೋಡುತ್ತ ಮುಂದಕ್ಕೆ ನಡೆಯಬೇಕು. ಆಗ ಮಾತ್ರ ಸೇರಬೇಕಾದ ಗುರಿಯನ್ನು ತಲುಪಬಹುದು. ಆಧುನಿಕ ಮಾನವನಿಗೂ ಇದೇ ಬೇಕು. ಸಾರಥಿಯ ಬ್ರೇಕ್ ಬೇಕು; ಬುದ್ಧಿಯ ಬ್ರೇಕ್ ಬೇಕು. ಬುದ್ಧಿ ಅಂದರೆ ವಿಚಾರ ಶಕ್ತಿ. ಸದಸದ್—ಒಳಿತು ಕೆಡಕುಗಳ—ವಿಚಾರದ ಶಕ್ತಿ. ಸದಾ ಇಂದ್ರಿಯಗಳ ವಿಷಯಗಳ ಸಂಗದಲ್ಲಿ ಇದ್ದರೆ ಸರಿ ಯಾವುದು ಮತ್ತು ತಪ್ಪು ಯಾವುದು ಎಂಬುದರ ಅರಿವೇ ಇರುವುದಿಲ್ಲ. ಸತ್ಸಂಗವಿಲ್ಲದ ಜೀವನ ವಿನಾಶಕ್ಕೆ ಆಹ್ವಾನ.

ಶ್ರೀರಾಮಕೃಷ್ಣರನ್ನು ಎರಡನೆಯ ಸಲ ಭೇಟಿಯಾಗಲು ಮಾಸ್ಟರ್ ಮಹಾಶಯ ದಕ್ಷಿಣೇಶ್ವರಕ್ಕೆ ಬಂದಾಗ ವಿದ್ಯೆಯ ಅಹಂಕಾರದಿಂದ ತರ್ಕ ಮಾಡಲು ಮುಂದುವರಿಯುತ್ತಾನೆ. ಆದರೆ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ತಿಳಿವಿನ ಮುಂದೆ ಅವನ ಅಹಂಕಾರ ಚೂರ್ಣವಾಗುತ್ತದೆ. ನಂತರ ಖಿನ್ನ ಶಿಷ್ಯ ಸವಿನಯವಾಗಿ ಮೊಟ್ಟಮೊದಲನೆಯ ಪ್ರಶ್ನೆ ಮಾಡುತ್ತಾನೆ: "ಏನು ಮಾಡಿದರೆ ಭಗವಂತನ ಕಡೆ ಮನಸ್ಸು ಹರಿಯುತ್ತದೆ?" ಶ್ರೀರಾಮಕೃಷ್ಣರು ಹೇಳುತ್ತಾರೆ, "ಭಗವಂತನ ನಾಮಗುಣ ಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ಸತ್ಸಂಗ, ಎಂದರೆ ಭಗವದ್ಭಕ್ತರ, ಸಾಧು–ಸತ್ಪುರುಷರ ಸಹವಾಸ ಆಗಾಗ ಮಾಡುತ್ತಿರಬೇಕು. ಮನಸ್ಸು ಹಗಲಿರುಳೂ ಸಂಸಾರದಲ್ಲೇ, ಪ್ರಾಪಂಚಿಕ ಕೆಲಸ ಕಾರ್ಯಗಳಲ್ಲೇ ನಿರತವಾಗಿಬಿಟ್ಟರೆ, ಅದು ಭಗವನ್ಮುಖವಾಗಲಾರದು."

**ಸತ್ಸಂಗದ ಅರ್ಥ**

ಸತ್ಸಂಗ ಅಂದರೆ ಏನು? ನಾಲ್ಕು ಅರ್ಥಗಳನ್ನು ನಾವು ಕಾಣಬಹುದು.

೧. **ಸತ್ಯದ ಸಂಗ ಸತ್ಸಂಗ**: ಭಗವಂತನೇ ಸತ್ಯ. ಆತನೊಂದಿಗೆ ಇರುವುದೇ ಸತ್ಸಂಗ. ಎಂದೂ ನೋಡದ, ಕಾಣದ ಭಗವಂತನೊಂದಿಗೆ ಸಂಗ ಹೇಗೆ ಸಾಧ್ಯ? ದೇವರ ಬಗ್ಗೆ ನಮಗೇನಾದರೂ ವಿಷಯ ತಿಳಿಯಬೇಕಾದರೆ ಎರಡೇ ಮೂಲಗಳಿರುವುದು; ಶಾಸ್ತ್ರವಾಕ್ಯ ಮತ್ತು ಸಿದ್ಧಪುರುಷರ ನುಡಿ. ಈ ಎಲ್ಲ ಸೃಷ್ಟಿಗೂ ಕಾರಣವಿರಬೇಕು; ಗುರಿಯಿರಬೇಕು. ಆ ಕಾರಣವೇ ದೇವರು ಎಂಬುದನ್ನು ವಿಚಾರದ ಮೂಲಕ ತಿಳಿಯಬಹುದು. ಎಲ್ಲವೂ ಬದಲಾದರೂ ಮೂಲ ಕಾರಣವು ಬದಲಾಗದೇ ಇರಬೇಕು. ಅದೇ ಎಲ್ಲ ಬದಲಾವಣೆಗೂ ಆಧಾರವೆಂಬುದೇ ಈ ವಿಚಾರ. ಪ್ರತಿಯೊಂದು ಜೀವಿಯ ಅಂತಿಮ ಧ್ಯೇಯ ಆತನಲ್ಲಿ ಸೇರುವುದು. ಅದಕ್ಕಾಗಿ ಅವನ ಸಂಗ ಮಾಡಬೇಕು. ಪ್ರಪಂಚದ ಸಂಗದಿಂದ ಸುಖ ಸಿಗುವುದು ಎಂದು ನಾವು ಅದರ ಹಿಂದೆ ಓಡುತ್ತೇವೆ. ಆದರೆ ನಮಗೆ ಸಿಗುವುದು ಶ್ರೀರಾಮಕೃಷ್ಣರು ಹೇಳಿದಂತೆ 'ಆಮ್ಲಶೂಲ' (ಆ್ಯಸಿಡಿಟಿ) ಮಾತ್ರ.

ಭಗವಂತನ ಸಂಗ, ಸತ್ಯದ ಸಂಗವನ್ನು ಹೇಗೆ ಮಾಡುವುದು? ಈ ಒಂದು ವಿಷಯ ನಾವು ಮನದಟ್ಟು ಮಾಡಿಕೊಳ್ಳಬೇಕು—ನಮ್ಮೊಳಗೇ ಭಗವಂತ ಇದ್ದಾನೆ. ನಾರಾಯಣ ಸೂಕ್ತ ಹೇಳುತ್ತದೆ, ನಮ್ಮ ಕಂಠದಿಂದ ಹತ್ತು ಅಂಗುಲ ಕೆಳಗಿರುವ ಹೃದಯಕಮಲದಲ್ಲಿ ಜ್ಯೋತಿರೂಪದಿಂದ ಪರಮಪುರುಷನು ವಿಜೃಂಭಿಸುತ್ತಿದ್ದಾನೆ. ಇಲ್ಲಿ ಹೃದಯ ಅಂದರೆ ನಾವು ಭಯ, ಆಂತರಿಕ ಉದ್ವೇಗ, ಸಂತೋಷ, ಕ್ರೋಧ ಮುಂತಾದ ಭಾವನೆಗಳನ್ನು ಅನುಭವಿಸುವ ಆಧ್ಯಾತ್ಮಿಕ ಹೃದಯ.

**ಅಂಗುಷ್ಠಮಾತ್ರಃ ಪುರುಷಃ ಅಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ**— "ಅಂಗುಷ್ಠ ಪ್ರಮಾಣದ ಆತ್ಮ ಪುರುಷನು ಜನರ ಹೃದಯದಲ್ಲಿ ಸರ್ವದಾ ವಾಸಿಸುತ್ತಿದ್ದಾನೆ" (ಕಠೋಪನಿಷತ್). ಎಲ್ಲ ಶಕ್ತಿ, ಪ್ರೇಮ ವಾತ್ಸಲ್ಯಗಳ ಮೂರ್ತಿಯಾದ ಭಗವಂತ ನಮ್ಮಲ್ಲಿಯೇ ಇದ್ದಾನೆ. ಆದರೆ ಅವನ ಅಸ್ತಿತ್ವದಲ್ಲಿ ನಮಗೆ ನಂಬಿಕೆ ಇಲ್ಲ. ಪೂರ್ವಾಭ್ಯಾಸದ

ಸಂಸ್ಕಾರಗಳೇ ಇದಕ್ಕೆ ಕಾರಣ. ಆದರೆ ಅಭ್ಯಾಸಬಲದಿಂದ ಆತನಲ್ಲಿ ನಂಬಿಕೆಯನ್ನು ತರಬಹುದು. ಆ ನಂಬಿಕೆಯಿಂದ ಆತನೊಂದಿಗೆ ಸ್ನೇಹವನ್ನೂ ಬೆಳೆಸಬಹುದು.

ರಾಮಕೃಷ್ಣ ಮಹಾಸಂಘದ ಹತ್ತನೆಯ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಒಂದು ಪುಸ್ತಕವನ್ನು ಓದುವುದಕ್ಕೆ ಮತ್ತೆ ಮತ್ತೆ ಹೇಳುತ್ತಿದ್ದರು. ಅದೇ *Practice of the Presence of God.* ಈ ಪುಸ್ತಕದಲ್ಲಿ ಬ್ರದರ್ ಲಾರೆನ್ಸ್ ಎಂಬ ಸಂತನ ಜೀವನಘಟನೆಗಳು ಮತ್ತು ಪತ್ರಗಳಿವೆ. ಆ ಸಂತ ಹೇಗೆ ಭಗವಂತನ ಸಾನ್ನಿಧ್ಯದಲ್ಲಿ ಇರುತ್ತಿದ್ದ ಎನ್ನುವ ವಿವರಣೆ ಇದೆ. ಆತ ಪ್ಯಾರಿಸ್‌ನಲ್ಲಿ ಹುಟ್ಟಿ, ಹದಿನೆಂಟು ವರ್ಷ ವಯಸ್ಸಿನಲ್ಲಿ ಸೇನಾಪಡೆಗೆ ಸೇರಿದ. ಆದರೆ ಗಾಯಗೊಂಡು ಸೈನ್ಯವನ್ನು ಬಿಟ್ಟ. ಆಗ ಆತನಲ್ಲಿ ಧಾರ್ಮಿಕ ಪ್ರವೃತ್ತಿ ಹೆಚ್ಚೇನೂ ಇರಲಿಲ್ಲ. ಆದ್ದರಿಂದ ಒಂದೆರಡು ಸಾರಿ ತಪಸ್ವಿಯಾಗಲು ಪ್ರಯತ್ನಿಸಿ ವಿಫಲನಾದ. ಕೆಲವೊಂದು ವರ್ಷ ವ್ಯಥಾ ಸಮಯ ಕಳೆದು ಕೊನೆಗೆ ಕ್ರೈಸ್ತ ಪಾದ್ರಿಗಳ ಸಂಘವೊಂದನ್ನು ಸೇರಿದ. ಒಂದು ಧಾರ್ಮಿಕ ಸಂಘ ಸೇರುವುದೇನೋ ಸುಲಭ. ಆದರೆ ಅದರಲ್ಲಿ ಉಳಿದು ಬಾಳುವುದು ಕಷ್ಟ. ಸಂಘ ಸೇರಿದ ಮೇಲೆ ಅವನು ಅಳವಡಿಸಿಕೊಂಡ ವಿಚಾರ ಇದು: "ಭಗವಂತನ ಸಾನ್ನಿಧ್ಯದಲ್ಲಿ ನನ್ನನ್ನು ನಾನು ಇರಿಸಿಕೊಳ್ಳಬೇಕು. ಆತ ನನ್ನ ಹೃದಯದಲ್ಲೇ ಇದ್ದಾನೆ. ಉನ್ನತವಾದ ಭಗವಚ್ಚಿಂತನೆಯಲ್ಲಿ ಮುಳುಗಿ, ಆತನ ಸಂಗದಲ್ಲಿ ಆನಂದದಿಂದ ತುಂಬಿರಬೇಕು. ನನ್ನ ಪ್ರತಿದಿನದ ಕಾರ್ಯದಲ್ಲೇ ಅದನ್ನು ಮಾಡಬೇಕು." ಹೀಗೆಂದು ದೃಢ ನಿರ್ಧಾರ ಮಾಡಿದ. ನಿಗದಿಪಡಿಸಿದ ಸಮಯದಲ್ಲಿ ಪ್ರಾರ್ಥನಾದಿ ಅಭ್ಯಾಸಗಳನ್ನು ಮಾಡುತ್ತಿದ್ದ. ಅವು ಹೆಚ್ಚಿನ ಬಾರಿ ಯಾಂತ್ರಿಕವಾಗಿಯೇ ನಡೆಯುತ್ತಿದ್ದವು. ಅವುಗಳ ಜೊತೆಗೆ ಭಗವಂತನ ಸಾನ್ನಿಧ್ಯದ ಅಭ್ಯಾಸವನ್ನು ಮಾಡಿದ. ಮೊದಲು ಕೆಲವು ವರ್ಷಗಳ ಕಾಲ ಅಡಿಗೆಮನೆಯ ಕೆಲಸ ಮಾಡಬೇಕಾಗಿ ಬಂತು. ಆ ಕೆಲಸ ಅಂದರೆ ಅವನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೂ ಭಗವಂತನ ಪ್ರೀತಿಗಾಗಿ ಅದನ್ನು ಮಾಡತೊಡಗಿದ. ಕೆಲಸದ ಮಧ್ಯದಲ್ಲೇ ಕೆಲಸವನ್ನು ನಿಲ್ಲಿಸಿ ಸಂಪೂರ್ಣ ಶ್ರದ್ಧೆಯಿಂದ, ಆಂತರಿಕ ಭಾವನೆಯಿಂದ ಈ ಕೆಳಕಂಡಂತಹ ಉಕ್ತಿಗಳಲ್ಲಿ ಕೆಲವನ್ನು ಹೇಳಿಕೊಳ್ಳುತ್ತಿದ್ದ: "ಹೇ ಭಗವಂತ, ನಾನು ನಿನ್ನನ್ನು ಆಂತರಿಕವಾಗಿ ಪ್ರೀತಿಸುತ್ತೇನೆ"; "ಹೇ ಭಗವಂತ ನಾನು ಈಗ ಈ ಕೆಲಸವನ್ನು ಮಾಡಬೇಕಾಗಿದೆ. ದಯಪಿಟ್ಟು ನೀನು ಶಕ್ತಿ ಕೊಟ್ಟು ಇದನ್ನು ಮಾಡಿಸು!"; "ಹೇ ಭಗವಂತ, ನಿನಗೆ ವಂದನೆಗಳು!"; "ಹೇ ಭಗವಂತ, ನಿನ್ನ ಸ್ಮರಣೆಯಲ್ಲಿ ಮುಳುಗಿರುವಂತೆ ಮಾಡು!"; "ಹೇ ಭಗವಂತ ಪ್ರಾಪಂಚಿಕ ವಸ್ತುಗಳೆಡೆ ನನ್ನ ಮನಸ್ಸು ಹೋಗದಂತೆ ಮಾಡು!"

ಈ ರೀತಿ ಪ್ರಾರ್ಥನೆ ಮಾಡುವಾಗ ಅವನ ಮನಸ್ಸು ಮತ್ತೆ ಮತ್ತೆ ವಿರೋಧಿಸುತ್ತಿತ್ತು. ಆದರೆ ಅವನ ನಿರ್ಧಾರ ದೃಢವಾಗಿತ್ತು. ಕ್ರಮೇಣ ಭಗವಂತನ ಸಾನ್ನಿಧ್ಯವನ್ನು, ಆತನ ಸಂಗವನ್ನು ಹೆಚ್ಚು ಅನುಭವಿಸುತ್ತಾ ಜೀವನದಲ್ಲಿ ಪರಿಪೂರ್ಣ ಆನಂದವನ್ನು ಪಡೆದ. ಭಗವಂತನ ಸಂಗ ಅಂದರೆ ಸತ್ಯದ ಸಂಗ. ಇದಿದ್ದರೆ ನಮಗೇನೂ ಭಯವಿಲ್ಲ. ನಿರ್ಭಯವಾಗಿ ಜೀವನದ ರಥವನ್ನು ಸರಿಯಾಗಿ ನಡೆಸಿಕೊಂಡು ಹೋಗಬಹುದು.

**೨. ಸತ್ಪುರುಷರ ಸಂಗ ಸತ್ಸಂಗ:** ನಾವು ಏಕಾಂತದಲ್ಲಿರುವಾಗ ಭಗವಂತನ ಸಂಗವನ್ನು ಮಾಡಬಹುದು. ಆದರೆ ಈ ಜಗತ್ತಿನಲ್ಲಿ ವಾಸಮಾಡುತ್ತಿರುವುದರಿಂದ ಇತರರೊಂದಿಗೆ ನಮ್ಮ ಸಂಪರ್ಕ ಆಗಿಯೇ ತೀರುತ್ತದೆ. ಇದು ಯಾವ ರೀತಿಯದ್ದಾಗಿರಬೇಕು ಅನ್ನುವುದು ನಮ್ಮ ವಿವೇಚನೆಗೆ ಒಳಪಟ್ಟಿದೆ. ಇಲ್ಲಿ ಎರಡು ರೀತಿಯ ಸಂಗವಿದೆ—ಸಾಧು ಸಜ್ಜನರ ಸಂಗ ಮತ್ತು ದುರ್ಜನರ ಸಂಗ. ದುರ್ಜನರ ಸಂಗದ ಪರಿಣಾಮವಾಗಿ ಜೀವನ ಏನಾಗಬಹುದು ಎಂಬುದರ ಅರಿವು ನಮಗೆಲ್ಲಾ ಇದ್ದೇ ಇದೆ. ದುರ್ಜನರ ಸಂಗ ಹಾವಿಗೆ ಹಾಲೆರೆದಂತೆ; ನಮ್ಮಲ್ಲಿರುವ ಕೆಟ್ಟ ಸಂಸ್ಕಾರಗಳು ಪ್ರಬಲಗೊಂಡು ಬದುಕು ವಿಷಮಯವಾಗುತ್ತದೆ. ಅದಕ್ಕೇ ಭರ್ತೃಹರಿ ತನ್ನ ನೀತಿಶತಕದಲ್ಲಿ ಹೇಳುತ್ತಾನೆ:

**ವರಂ ಪರ್ವತದುರ್ಗೇಷು ಭ್ರಾಂತಂ ವನಚರೈಃ ಸಹ ।**
**ನ ಮೂರ್ಖಜನಸಂಪರ್ಕಃ ಸುರೇಂದ್ರ ಭವನೇಷ್ವಪಿ ॥**

ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳೊಡನೆ ವಾಸಿಸುವುದು, ಬೆಟ್ಟಗಳ ಮೇಲಿನ ದುರ್ಗಮವಾದ ಪ್ರದೇಶಗಳಲ್ಲಿ ಅಲೆಯುವುದು ದೇವೇಂದ್ರನ ಮನೆಯಲ್ಲಿಯೇ ಆದರೂ ದೊರೆಯುವ ಮೂರ್ಖರ ಸಹವಾಸಕ್ಕಿಂತ ಉತ್ತಮ.

ಮೂರ್ಖರು ಅಂದರೆ ಇಲ್ಲಿ ಅತಿ ವಿಷಯಾಸಕ್ತಿಯುಳ್ಳ ಜನರು. ಅವರಿಂದ ದೂರವಿರಬೇಕು—ಯಾಕೆ? "ಕೆಳಗಿಳಿದು ಹರಿಯುವುದೇ ಜಲದ ನಿಜಗುಣವಯ್ಯಾ" ಅನ್ನುವ ಮಾತಿದೆ. ಪ್ರಪಂಚದ ವಿಷಯಗಳ ಕಡೆ ನಮ್ಮ ಮನಸ್ಸು ಸ್ವಾಭಾವಿಕವಾಗಿ ಹರಿಯುತ್ತದೆ. ಅಜಾಗರೂಕರಾಗಿ ವರ್ತಿಸಿದರೆ ಮುಳುಗುವುದಂತೂ ನಿಜ. ಆಧ್ಯಾತ್ಮಿಕ ಜೀವನದಲ್ಲಿ ನಾವು ಆಡುವ ಮಾತು, ನಡೆಸುವ ಸ್ಮರಣೆ, ಮಾಡುವ ಕಾರ್ಯ ಎಲ್ಲವೂ ಸತ್ಸಂಗದಿಂದ ತುಂಬಿರಬೇಕು. ವಿಷಯವಸ್ತುಗಳ ಬಗ್ಗೆ ಚರ್ಚೆಯ ಆಸಕ್ತಿ ನಮ್ಮಲ್ಲಿ ಯಾವಾಗ ಬರುವುದು? ನಮ್ಮೊಳಗೆ ಮೊದಲು ಅದಕ್ಕೆ ಒಪ್ಪಿಗೆ ದೊರೆತಾಗ ಮಾತ್ರ. ಆದ್ದರಿಂದ ಬೇರೆಯವರನ್ನು ನಿಂದಿಸಿ ಲಾಭವಿಲ್ಲ. ನಮ್ಮಲ್ಲಿ ಪರಿವರ್ತನೆಯನ್ನು ತರಬೇಕು.

**ಸಾಧು ಸಜ್ಜನರು ಯಾರು, ಅವರ ಲಕ್ಷಣ ಏನು?** ನಿಜವಾದ ಸಾಧು ಈ ಕೆಲವೊಂದು ಲಕ್ಷಣಗಳಿಂದ ಕೂಡಿರುತ್ತಾನೆ. ಆತ ಯಾವುದೇ ಅಪೇಕ್ಷೆಯಿಲ್ಲದೆ ಭಗವಂತನ ಪ್ರೀತಿಗಾಗಿ ಕಾರ್ಯಗಳನ್ನು ಮಾಡುತ್ತಾನೆ. ಅಂತರ್ಮುಖಿಯಾಗಿದ್ದು ನಿಂದೆ ಮತ್ತು ಸ್ತುತಿ, ಮಾನ ಮತ್ತು ಅಪಮಾನ, ಲಾಭ ಮತ್ತು ನಷ್ಟ ಮುಂತಾದ ದ್ವಂದ್ವಗಳಲ್ಲಿ ಸಮಾನವಾಗಿ ವರ್ತಿಸುತ್ತಾನೆ. ಗೊಂದಲವಿಲ್ಲದ ಮನಸ್ಸುಳ್ಳವನಾಗಿದ್ದು ಆತಂಕರಹಿತನಾಗಿ ಸಂಪೂರ್ಣ ಶಾಂತಿಯನ್ನು ಹೊಂದಿರುತ್ತಾನೆ. ಅವನ ಸುತ್ತ ಮುತ್ತ ನಾನಾ ವಿಕಾರಗಳಿದ್ದರೂ ಅವು ಯಾವುವೂ ಇವನನ್ನು ವಿಚಲಿತನನ್ನಾಗಿ ಮಾಡಲಾರವು. ತತ್ತ್ವವನ್ನರಿತವನಾಗಿ ಸಮದರ್ಶಿಯಾಗಿರುತ್ತಾನೆ. ಇಡೀ ವಿಶ್ವಬ್ರಹ್ಮಾಂಡ ಒಂದೇ ಚೈತನ್ಯದಿಂದ ತುಂಬಿರುವುದನ್ನು ಅವನು ಕಾಣುತ್ತಾನೆ. ಬೇರೆ ಬೇರೆ ಆಭರಣಗಳ ರೂಪ ಆಕಾರ ಬೇರೆ ಬೇರೆಯಾದರೂ ಮೂಲವಸ್ತು ಚಿನ್ನ ಒಂದೇ ಎಂಬ ದೃಷ್ಟಿ ಅವನದು. ಒಮ್ಮೆ ದಕ್ಷಿಣೇಶ್ವರಕ್ಕೆ ವಿಕಾರ ರೂಪದ ಒಬ್ಬ ವ್ಯಕ್ತಿ ಬಂದಿದ್ದ. ಅವನ ವಿಕಟ ರೂಪವನ್ನು ನೋಡಿ ಪ್ರಸಾದ ಸ್ವೀಕರಿಸುವ ಸ್ಥಳದಿಂದ ಆತನನ್ನು ದೂರ ಸರಿಸಿದರು. ಅಲ್ಲೇ ಒಂದೆಡೆ ನಾಯಿಗಳು ಎಂಜಲೆಲೆಗಳನ್ನು ನೆಕ್ಕುತ್ತಿದ್ದವು. ಆ ವ್ಯಕ್ತಿ ಕೂಡ ಅವುಗಳ ಜೊತೆ ಎಂಜಲೆಲೆಯನ್ನೇ ಆರಿಸಿಕೊಂಡು ತಿನ್ನುವುದನ್ನು ಶ್ರೀರಾಮಕೃಷ್ಣರು ನೋಡಿದರು. ಹೃದಯನಿಗೆ ಹೇಳಿದರು, "ನೋಡು. ಆತ ಮಹಾಪುರುಷ. ಹುಚ್ಚನಂತೆ ಇರುವ ಉನ್ಮಾದಾವಸ್ಥೆಯಿದು. ಅವನನ್ನು ಹಿಂಬಾಲಿಸಿ, ಅವನಿಂದ ಉಪದೇಶ ಪಡೆದು ಬಾ". ಹೃದಯ ಅವನನ್ನು ಹಿಂಬಾಲಿಸಿದಾಗ ಆತ ವಿರೋಧಿಸಿದ. ಆದರೆ ಹೃದಯ ಬಿಡದೆ ಹಿಂಬಾಲಿಸಿ ಉಪದೇಶ ಕೊಡಿರೆಂದು ಕೇಳಿಕೊಂಡ. ಆಗ ಆತ ಅಲ್ಲಿಯೇ ಇದ್ದ ಚರಂಡಿಯ ನೀರನ್ನು ತೋರಿಸುತ್ತಾ ಹೇಳಿದ, "ಯಾವಾಗ ನಿನಗೆ ಈ ಚರಂಡಿಯ ನೀರು ಮತ್ತು ಗಂಗೆಯ ನೀರು ಒಂದೇ ಎಂಬ ಅರಿವು ಉಂಟಾಗುತ್ತದೋ ಆಗಲೆ ನಿನಗೆ ನಿಜವಾದ ಜ್ಞಾನ ಬರುತ್ತದೆ." ಸಾಧುವಿನ ಇನ್ನೊಂದು ಗುಣವೇನೆಂದರೆ ಆತ ಎಲ್ಲರಲ್ಲೂ ಮೈತ್ರಿ ಭಾವವನ್ನು ಇಟ್ಟಿರುತ್ತಾನೆ. ಇಡೀ ವಿಶ್ವವನ್ನೇ ತನ್ನದಾಗಿಸಿಕೊಳ್ಳುತ್ತಾನೆ.

**ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥**

—ಹಿತೋಪದೇಶ

"ಈತ ನನ್ನವ, ಆತ ಬೇರೆಯವ—ಈ ರೀತಿಯ ಲೆಕ್ಕಾಚಾರಗಳು ಸಣ್ಣ ಮನಸ್ಸಿನವರಿಗೆ ಮಾತ್ರ, ಉದಾರಚರಿತರಿಗೆ ಇಡೀ ಪ್ರಪಂಚವೇ ತಮ್ಮ ಮನೆ." ಇಂತಹ ಲಕ್ಷಣಗಳುಳ್ಳ ಸಾಧುಗಳು ಸಿಗುವುದು ದುರ್ಲಭ. ಅವರ ಸಂಗ ಒಂದು ಕ್ಷಣವಾದರೂ ಸಿಕ್ಕಿದರೆ ಸಾಕು, ನಮ್ಮ ಬದುಕೇ ಬದಲಾಗುತ್ತದೆ. ಅವರ ಕೃಪೆಯಿಂದ ಸಮಸ್ತ ಬಂಧನಗಳೂ ಛಿನ್ನಛಿನ್ನವಾಗಿ ನಾವು ತಾಪತ್ರಯದಿಂದ ಮುಕ್ತರಾಗುತ್ತೇವೆ. ಅಂತಹ ಸೌಭಾಗ್ಯ ಅಜಾಮಿಳನಿಗೆ ದೊರಕಿತ್ತು. ಅಹಂಕಾರದಿಂದ ಕೂಡಿದ ಅವನು ಸಾಧು ಸತ್ಪುರುಷರ ಸಂಗವನ್ನು ಸ್ವತಃ ಬಯಸದಿದ್ದರೂ ಕಡೆಗಾಲದಲ್ಲಿ ಒಂದು ಕ್ಷಣ ಮಾಡಿದ. ಅದರಿಂದ ಅವನ ಜೀವನವೇ ಧನ್ಯವಾಯಿತು. ಅದೇ ರೀತಿ ದಸ್ಯು ರತ್ನಾಕರನೂ ನಾರದರ ಸತ್ಸಂಗದಿಂದ ವಾಲ್ಮೀಕಿಯಾದ.

ಪ್ರತಿಯೊಬ್ಬ ಅಧ್ಯಾತ್ಮ ಸಾಧಕನೂ ಆಗಾಗ ನಿರ್ಜನ ಸ್ಥಳದಲ್ಲಿದ್ದು ವ್ಯಾಕುಲತೆಯಿಂದ ಭಗವಂತನನ್ನು ಕರೆಯಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದು ಸಾಧ್ಯವಾಗದಿದ್ದಲ್ಲಿ ಸಾಧುಸಂಗ ಮಾಡಬೇಕು ಎಂದು ಹೇಳುತ್ತಾರೆ. ಸಂಸಾರದಲ್ಲಿ ಕಾಮಕಾಂಚನ ಸರ್ವದಾ ತಗುಲಿಕೊಂಡೇ ಇರುತ್ತದೆ. ಅದಕ್ಕೆ ಅಂಟಿಕೊಳ್ಳದಿರಲು ಸಾಧುಸಂಗ ಮಾಡಬೇಕು. ಸಿದ್ಧಪುರುಷರು ಸಿಗದೇ ಇರಬಹುದು. ಆದರೆ ಅಧ್ಯಾತ್ಮ ಮಾರ್ಗದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಸಾಧು ಗುಣಗಳುಳ್ಳ ವ್ಯಕ್ತಿಗಳಂತೂ ಸಿಗುತ್ತಾರೆ. ಅಂತಹ ಸಾಧು ಪುರುಷರ ಸಂಗವನ್ನು ನಾವು ಅವಶ್ಯವಾಗಿ ಇಟ್ಟುಕೊಳ್ಳಬೇಕು.

**೩. ಸದ್ವಿಚಾರದ ಸಂಗ ಸತ್ಸಂಗ :** ಈ ಜಗತ್ತಿನಲ್ಲಿ ಸಕ್ಕರೆ ಮತ್ತು ಮರಳಿನ ಮಿಶ್ರಣದಂತೆ ಸತ್ ಮತ್ತು ಅಸತ್‌ನ ಮಿಶ್ರಣ ಇದೆ. ಸತ್ ಯಾವುದು, ಅಸತ್ ಯಾವುದು? ನಿತ್ಯ ಯಾವುದು ಅನಿತ್ಯ ಯಾವುದು ಎಂಬುದರ ವಿಚಾರ ಮಾಡಬೇಕು. ವಿಚಾರದ ಮೂಲಕ ನಮ್ಮಲ್ಲಿರುವ ಭ್ರಾಂತಿ ಗೊತ್ತಾಗುತ್ತದೆ. ಅಸತ್ ಮತ್ತು ಅನಿತ್ಯವನ್ನು ತೊರೆದು ಸತ್ ಮತ್ತು ನಿತ್ಯವನ್ನು ಗಟ್ಟಿಯಾಗಿ ಹಿಡಿಯುವಂತೆ ಮನಸ್ಸನ್ನು ಒಗ್ಗಿಸಬೇಕು.

ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಸತತ ಸದ್ವಿಚಾರ ಮಾಡುತ್ತಿರಬೇಕು—ಭಗವಂತನೊಬ್ಬನೇ ಸತ್, ನಿತ್ಯವಸ್ತು; ಉಳಿದದ್ದೆಲ್ಲ ಅಸತ್, ಅನಿತ್ಯವಸ್ತು. ಹೀಗೆ ವಿಚಾರ ಮಾಡುತ್ತ ಅನಿತ್ಯ ವಸ್ತುಗಳ ಮೇಲಿನ ಅನುರಾಗವನ್ನು ಕೊನೆಗೆ ಮನಸ್ಸಿನಿಂದ ಕಿತ್ತೊಗೆಯಬೇಕು." ಶಾಸ್ತ್ರಗಳಲ್ಲಿ, ಸಾಧುಸಂತರ ವಾಣಿಯಲ್ಲಿ ಸದ್ವಿಚಾರ ಸಿಗುತ್ತದೆ. ಅವುಗಳನ್ನು ಮತ್ತೆ ಮತ್ತೆ ಓದಬೇಕು, ಮನದಟ್ಟು ಮಾಡಿಕೊಳ್ಳಬೇಕು. ಭಗವಂತನ, ಸಾಧು ಸತ್ಪುರುಷರ ಗುಣ ಸಂಕೀರ್ತನೆಯನ್ನು ಮಾಡುವುದು ಸದ್ವಿಚಾರ. ಶಾಸ್ತ್ರ ಓದುವುದೂ ಸದ್ವಿಚಾರವೇ. ವಿಚಾರದ ಮೂಲಕ ನಮ್ಮನ್ನು ನಾವು ಪರೀಕ್ಷಿಸಿ ನೋಡಿಕೊಳ್ಳಬೇಕು—ನಮ್ಮ ಮನಸ್ಸಿನಲ್ಲಿ ಎಷ್ಟರ ಮಟ್ಟಿಗೆ ಅಸದ್ವಿಚಾರಗಳು ಮೂಡುತ್ತಿವೆ ಎಂದು. ಅರಿಷಡ್ವರ್ಗಗಳೇ ಅಸದ್ವಿಚಾರಗಳು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ—ಇವುಗಳಲ್ಲಿ ಯಾವುದು ನನ್ನನ್ನು ಪೀಡಿಸುತ್ತಿದೆ ಎಂಬುದನ್ನು ತಿಳಿಯ

ಬೇಕು. ಮನಸ್ಸಿನಲ್ಲಿ ಯಾರ ಮೇಲಾದರೂ ಕ್ರೋಧವಿದ್ದರೆ ನಾವು ಅಸತ್ ಸಂಗದಲ್ಲಿದ್ದೇವೆ, ಎಂದು ಅರ್ಥ. ಆಗ ಆ ಅಸತ್ ಸಂಗದ ವಿರುದ್ಧವಾದ ಪ್ರೇಮಭಾವವನ್ನು ಮನಸ್ಸಿನಲ್ಲಿ ತುಂಬಿಕೊಳ್ಳುವ ಮೂಲಕ ಸತ್‌ಸಂಗದಲ್ಲಿರುವ ಪ್ರಯತ್ನ ಮಾಡಬೇಕು.

**೪. ಸತ್ಕರ್ಮದ ಸಂಗ ಸತ್ಸಂಗ :** ಯಾವ ಒಂದು ವ್ಯಕ್ತಿಯೂ ಒಂದು ಕ್ಷಣವೂ ಕರ್ಮ ಮಾಡದೆ ಸುಮ್ಮನೆ ಇರಲಾರ ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ. ಅಂದರೆ ಕರ್ಮಗಳ ಸಂಗ ತಪ್ಪಿಸಿಕೊಳ್ಳುವಂತಿಲ್ಲ. ಕರ್ಮ ಮಾಡಲೇಬೇಕಾಗಿರುವುದರಿಂದ ಅವು ನಮ್ಮ ಅಭಿವೃದ್ಧಿಗೆ ಅನುಕೂಲವಾಗುವಂತೆ ಮಾಡಬೇಕು. ಇಲ್ಲಿಯೂ ಕೂಡ ಕರ್ಮಗಳನ್ನು ಸತ್ಕರ್ಮ ಮತ್ತು ಅಸತ್ಕರ್ಮ ಎಂದು ವಿಂಗಡಿಸಬೇಕು. ಯಾವ ಕರ್ಮಗಳು ಆತ್ಮವಿಕಾಸಕ್ಕೆ ಅಡಚಣೆಯನ್ನು ತರುತ್ತವೋ ಅವು ಅಸತ್ಕರ್ಮ. ಉದಾಹರಣೆಗೆ ಕಳ್ಳತನ, ಮೋಸ, ವಂಚನೆ, ಜೂಜಾಡುವುದು, ಮದ್ಯಪಾನ, ಕೊಲೆ ಇತ್ಯಾದಿಗಳು ಅಸತ್ಕರ್ಮ. ಇವನ್ನು ಮಾಡಿದವನ ಪಾಪವು ಹೆಚ್ಚಾಗಿ ಆತ್ಮಗ್ಲಾನಿಯನ್ನು ಉಂಟುಮಾಡುತ್ತವೆ. ಅದಲ್ಲದೆ ಅತಿಯಾಗಿ ಇಂದ್ರಿಯ ಸುಖಗಳನ್ನು ಭೋಗಿಸುವುದೂ ಅಸತ್ಕರ್ಮವೇ.

ಯಾವ ಕರ್ಮಗಳು ನಮ್ಮನ್ನು ದೇವರೊಂದಿಗೆ ಸೇರಿಸುವ ದಿಶೆಯಲ್ಲಿರುತ್ತವೋ ಅವು ಸತ್ಕರ್ಮಗಳು. ದೇವರ ಭಾವಚಿತ್ರ ಅಥವಾ ವಿಗ್ರಹದ ಮೂಲಕ ಆತನ ಸ್ಮರಣೆ ಮಾಡುತ್ತಾ ಆತನ ಪೂಜೆ ಮಾಡುವುದು ಸತ್ಕರ್ಮ. ಅದರಂತೆ ಜಪ, ಧ್ಯಾನ ಮಾಡುವುದೂ ಸತ್ಕರ್ಮವೇ. ಮನೆಗಳಲ್ಲಿ, ಶಾಲೆಗಳಲ್ಲಿ, ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ಮಾಡುವ ನಿತ್ಯ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುವುದೂ ಸತ್ಕರ್ಮವೇ. ಆಧುನಿಕ ಕಾಲಕ್ಕಾಗಿ ಸರಳ ಅಭ್ಯುದಯ ಮಾರ್ಗವನ್ನು ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟಿದ್ದಾರೆ. ಅದೇ ಶಿವಭಾವದಿಂದ ಜೀವನ ಸೇವೆ. ದುಃಖಿಗಳಲ್ಲಿ, ದೀನರಲ್ಲಿ, ಆರ್ತರಲ್ಲಿ ದೇವರನ್ನು ನೋಡುತ್ತಾ ಅವರ ಸೇವೆಮಾಡುವುದು— ಇದು ಉತ್ಕೃಷ್ಟ ಸತ್ಕರ್ಮ. ಈ ಕರ್ಮ ಬಹಳ ಶೀಘ್ರವಾಗಿ ನಮ್ಮಲ್ಲಿರುವ ಅಜ್ಞಾನವನ್ನು ನಾಶ ಮಾಡಿ ನಮ್ಮ ಜೀವನದಲ್ಲಿ ದಿವ್ಯವಾದ ಬೆಳಕನ್ನು ತರುತ್ತದೆ.

**ಸತ್ಸಂಗ : ಜೀವನದ ಉದ್ದೇಶ ಸಾಧನೆ**

ಜೀವನದ ಉದ್ದೇಶವೇನು ಎಂಬ ಪ್ರಶ್ನೆ ಎಲ್ಲ ಸಾಧಕರನ್ನೂ ಮತ್ತೆ ಮತ್ತೆ ಕಾಡುತ್ತಿರುತ್ತದೆ. ಪ್ರಕೃತಿಯನ್ನು ಗಮನಿಸಿದರೆ ಅದಕ್ಕೆ ಉತ್ತರ ಸಿಗುತ್ತದೆ. ಒಂದು ಸಸ್ಯ ಸಾಧ್ಯವಾದಷ್ಟೂ ಬೆಳೆಯುತ್ತದೆ. ಆ ಪ್ರಕ್ರಿಯೆಯಲ್ಲಿ ಜಗತ್ತಿಗೂ ತನ್ನಿಂದಾಗಬಹುದಾದ ಹಣ್ಣು, ಹೂವು, ಇತ್ಯಾದಿಗಳನ್ನು ಕೊಡುತ್ತದೆ. ಮನುಷ್ಯನೂ ಕೂಡ ಅದನ್ನು ಅನುಸರಿಸಬಹುದು. ಪ್ರಾಣಿ ಅಥವಾ ಸಸ್ಯಗಳಲ್ಲಿ ಭೌತಿಕ ಅಥವಾ ದೈಹಿಕ ಬೆಳವಣಿಗೆ ಮಾತ್ರ ಸಾಧ್ಯ. ಆದರೆ ಮನುಷ್ಯ ದೈಹಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಲು ಸಾಧ್ಯವಿಲ್ಲ. ಆತನಿಗೆ ಆಂತರಿಕ ಬೆಳವಣಿಗೆಯೂ ಬೇಕು. ಅಂದರೆ ಮಾನಸಿಕ ಭಾವನೆಗಳ ಬೆಳವಣಿಗೆ, ಬುದ್ಧಿಶಕ್ತಿಯ ಬೆಳವಣಿಗೆ, ಅಧ್ಯಾತ್ಮಶಕ್ತಿಯ ಬೆಳವಣಿಗೆ. ದೈಹಿಕ ಬೆಳವಣಿಗೆಗೆ ಒಂದು ಮಿತಿಯಿದೆ. ಆಂತರಿಕ ಉನ್ನತಿಗೆ ಯಾವ ಮಿತಿಯೂ ಇಲ್ಲ. ಉದಾಹರಣೆಗೆ ಇತರರಿಗೆ ದಯೆ ಮತ್ತು ಪ್ರೀತಿ ತೋರಿಸುವುದು. ಅದು ಅಧಿಕವಾಗುತ್ತ ಅನಂತವನ್ನೇ ಮುಟ್ಟಬಹುದು. ಅಂತಹ ಗುರಿಯನ್ನು ಮುಟ್ಟಿದ ವ್ಯಕ್ತಿ ಸುಲಭವಾಗಿ ಹೇಳಬಲ್ಲ:

**ಮಾತಾ ಚ ಪಾರ್ವತೀ ದೇವೀ ಪಿತಾ ದೇವೋ ಮಹೇಶ್ವರಃ ।**
**ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥**

"ಪಾರ್ವತೀದೇವಿಯೇ ನನ್ನ ತಾಯಿ; ಶಿವನೇ ನನ್ನ ತಂದೆ; ಶಿವಭಕ್ತರೆಲ್ಲರೂ ನನ್ನ ಬಾಂಧವರು. ನನ್ನ ದೇಶವೇ ನನಗೆ ತ್ರಿಲೋಕಗಳಾಗಿವೆ."

ಇನ್ನು ಆಂತರಿಕ ಬೆಳವಣಿಗೆ ಹೇಗೆ ಸಾಧ್ಯ? ಅದಕ್ಕೆ ಎರಡು ಅಗತ್ಯಗಳಿವೆ. ಒಂದು ನಮ್ಮ ಶ್ರದ್ಧಾಯುಕ್ತ ಪ್ರಯತ್ನ. ಎರಡನೆಯದು ಉಪಯುಕ್ತ ಪರಿಸರ—ಅಂದರೆ ಶುದ್ಧ ಗಾಳಿ, ಬೆಳಕು ಇತ್ಯಾದಿ. ನಾವು ಯಾವ ದೇಶ, ಕಾಲ, ವಸ್ತು ಮತ್ತು ಜನರೊಂದಿಗೆ ಪರಸ್ಪರ ವಿನಿಮಯ, ಸಂಪರ್ಕಗಳನ್ನು ಮಾಡುವೆವೋ ಅವೇ ನಮ್ಮ ಪರಿಸರ. ಅವನ್ನೇ ಶಾಸ್ತ್ರಗಳು 'ಸಂಗ' ಎಂದು ಹೇಳುತ್ತವೆ. ಸತ್ ಆಗಿರಬೇಕು ಈ ಸಂಗ. ಸತ್ಸಂಗದಿಂದ ನಾವು ಆಂತರಿಕ ಬೆಳವಣಿಗೆಯನ್ನು ಸಾಧಿಸಿ ನಮ್ಮ ಜೀವನವನ್ನು ಧನ್ಯವಾಗಿಸಿಕೊಳ್ಳಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ನಮ್ಮ ದಿನದಿನದ ಬದುಕಿನಲ್ಲಿ ಹಲವು ಬಾರಿ ಏಕಾಂತದಲ್ಲಿ ದೇವರನ್ನು ಕರೆಯುತ್ತ, ಕೆಲವೊಮ್ಮೆ ಸದ್ವಿಚಾರ ಮಾಡುತ್ತ, ಕೆಲವೊಮ್ಮೆ ಸಜ್ಜನರ ಸಂಗ ಮಾಡುತ್ತ, ಸತ್ಕರ್ಮದಲ್ಲಿ ತೊಡಗಬೇಕು. ಆಗ ಮಾತ್ರ ಜೀವನ ಪಥದ ಎಲ್ಲ ಅಡಚಣೆಗಳಲ್ಲಿ ತಿರುವುಮುರುವುಗಳಲ್ಲಿ ನಾವು ಬ್ರೇಕ್ ಹಾಕಬಲ್ಲೆವು. ಸಂಯಮದಿಂದ ತನ್ನ ಸಾಮರ್ಥ್ಯವನ್ನು ವರ್ಧಿಸಿಕೊಂಡ ವಾಹನ ಮಾತ್ರ ಗುರಿಯನ್ನು ಸೇರಬಲ್ಲದು. ✪

**ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ ।**
**ನಿರ್ಮೋಹತ್ವೇ ನಿಶ್ಚಲತತ್ತ್ವಂ ನಿಶ್ಚಲತತ್ತ್ವೇ ಜೀವನ್ಮುಕ್ತಿಃ॥**

ಸತ್ಸಂಗದಿಂದ ಪ್ರಾಪಂಚಿಕ ವಸ್ತುಗಳ ಜೊತೆಗಿನ ಸಂಗ ಹೋಗುವುದು. ಅದರಿಂದ ಅವುಗಳ ಮೇಲಿನ ಮೋಹ ನಿವಾರಣೆಯಾಗಿ ಭಗವತತ್ತ್ವದಲ್ಲಿ ಮನಸ್ಸು ನೆಲೆಗೊಳ್ಳುವುದರಿಂದ ಬದುಕಿರುವಾಗಲೇ ಮುಕ್ತಿಯು ಲಭಿಸುವುದು. – *ಭಜಗೋವಿಂದಂ ಸ್ತೋತ್ರ*